Regd No M 1299 34 th Year ತಾ|| 28—3—51

SATYAVADI

ಸತ್ಯವಾದಿ

ಸ್ಥಾಪಕರು- ಅರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಅನಂತವಂತರ ಕಳ್ಳಪೇಟಿಗರ ಸಂಸ್ಥೆ ಇಂದಿನ ಕಾಂಗ್ರೆಸ್!

ರೆಡ್ಡಿಗಳಿಗೆ ಅನಾರೋಗ್ಯ

ವೆಂಕಟಸುಬ್ಬಯ್ಯ ಮುಖ್ಯಮಂತ್ರಿಗಳಿಗೆ ಅನಾರೋಗ್ಯ. ಆದ್ದರಿಂದ ಬೆಂಗಳೂರಿನಲ್ಲಿ ನಡೆಯುತ್ತಿರುವ ಶಾಸನ ಸಭೆಗೆ ಅವರು ನಿನ್ನೆ ಹೋಗಲಿಲ್ಲ.

ಇನ್ನೂ ಯೋಚನೆಯಲ್ಲಿದೆ

ನಗರ ಪೌರಸಭೆ ವರ್ಗಕ್ಕೆ ಕೆ. ಜಿ. ಎಫ್. ಸ್ಯಾನಿಟರಿ ಸಮಿತಿಯನ್ನ ಸೇರಿಸುವ ಅಂಶ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎಂದು ಬೆಂಗಳೂರು ವಾರ್ತೆ.

ಮದುವಣ್ಗಿತ್ತಿಗೆ ಉಚ್ಚಾಟನೆ

ಕಾತಿ ಎಂಬವಳನ್ನು ಜಂಬೂಸಾರಿನಿಂದ ಹೊರ್ಕೆ ತಳ್ಳಲಾಗಿದೆ ಹೆಸರನ್ನು ಬದಲಾವಣೆ ಮಾಡ್ಕೊಂಡು, ಮಾಡ್ಕೊಂಡು ಅವಳು ಅನೇಕ ಮುಂದಿಗೆ ಮದ ಆಗುತ್ತಿದ್ದಳು!

ಅರಳಿ ಬೆಳೆಯೋ ಪ್ರದೇಶ

920000 ಎಕರೆಯಷ್ಟು ಭೂಮಿಯನ್ನ ಈ ಬಾರಿ ಅರಳಿ ಬೆಳೆಗಾಗಿ ಭಾರತದಲ್ಲಿ ಉಪಯೋಗಿಸಲಾಗಿದೆ.

ಅಣು ಬಾಂಬು ಎಸೆಯಬೇಡಿ

ಪಾಕಿಸ್ಥಾನ ಸರ್ಕಾರಕ್ಕೆ ರಾವಲ್ಪಿಂಡಿಯ ಅರ್ಧ ಸೂರು ನಾಯಕರು ಮನವಿ ಅರ್ಪಿಸಿ ಪರಮಾಣು ಬಾಂಬು ಪ್ರಯೋಗವನ್ನು ಅಮೇರಿಕಾ ಸಮುದಾಯದಲ್ಲಿ ಮಾಡದಂತೆ ವರ್ಚಸ್ಸು ಬೀರಬೇಕೆಂದು ಪ್ರಾರ್ಥಿಸಿದ್ದಾರೆ.

ಹಿಂದು ಲಕ್ಷ್ಮಿಟ್ಟ ಹೆಚ್ಚು ಕಾಳು

ವಿದೇಶ ಪ್ರಾಂತ್ಯಕ್ಕೆ 5 ಲಕ್ಷ ಟನ್ ಧಾನ್ಯದ ಜೊತೆಗೆ 1 ಲಕ್ಷ ಟನ್ ಹೆಚ್ಚು ಧಾನ್ಯ ಕೊಡಲು ಭಾರತ ಸರ್ಕಾರ ನಿಗದಿ ಮಾಡಿದೆಯೆಂದು ಗೊತ್ತಾಗಿದೆ ಅಕ್ಕಿ ಪಡಿತರ ಹೆಚ್ಚಬಹುದು.

ಕಾಂಗ್ರೆಸ್ ರಾಜ್ಯಭಾರದಲ್ಲಿ ಶ್ರೀಮಂತರು ಶ್ರೀಮಂತರಾಗುತ್ತಲೇ ಇರುವರು. ಬಡವರು ಬಡವಂತರಾಗುತ್ತಲೇ ಇದ್ದಾರೆ – ಎಂದು ರೈತ ಕಾರ್ಮಿಕ ಪಕ್ಷದ ಕಾರ್ಯದರ್ಶಿ ಶ್ರೀ ಪಿ ಸಿ ಘೋಷ್ ಹೌರಾದಲ್ಲಿ ತಿಳಿಸಿದ್ದಾರೆ. ಇಂದಿನ ಕಾಂಗ್ರೆಸ್ ಸಂಸ್ಥೆ ಅನಂತವಂತರಿಂದ ಕಳ್ಳಪೇಟಿಗರಿಂದ ಮುಕ್ತ ಪರ್ಮಿಟ್ ಮುಕ್ತ ಲೈಸೆನ್ಸ್ ಅಪೇಕ್ಷಿಸುವವರಿಂದ ಸೇರಿದೆ – ಎಂದರು

ಮರಣ!

ಹೊಲಿನ ಅಭಾವದಿಂದ ಪ್ರಾಪ್ತವಾದ ನಿರುದ್ಯೋಗದ ದೆಸೆಯಿಂದ ಅನ್ನವಿಲ್ಲದೆ ಕ್ರಿಷ್ಣದಲ್ಲಿ ಇಬ್ಬರು ಸತ್ತಿರುವುದು ನಿಗದಿಯಾಯಿತು

ಉಪವಾಸ ಬಂದಿಗಳು

ಅಲಿಪ್ಪಿ ಕಾರಾಗೃಹದಲ್ಲಿ ಕೆಲವು ಬಂದಿಗಳು ಆರು ದಿವಸಗಳಿಂದ ಉಪವಾಸ ಮಾಡುತ್ತಿರುವದಾಗಿ ತಿರುವೇಂದ್ರಂ ವಾರ್ತೆ

ಕಮ್ಯುನಿಸ್ಟರು ತಣ್ಣಗಾಗಿಲ್ಲ

ಕಮ್ಯುನಿಸ್ಟರು ಮಣಿಪುರದಲ್ಲಿ ಇನ್ನೂ ಗಲಭೆ ಮಾಡುತ್ತಿರುವರು ಎಂಬುದಾಗಿ ಶ್ರೀ ಕೆ. ಸಂತಾನಂ ದೆಹಲಿ ಪಾರ್ಲಿಮೆಂಟ್ನಲ್ಲಿ ತಿಳಿಸಿದ್ದಾರೆ.

× ದಲಾಯಿ ಲಾಮ ನೇಪಾಳಕ್ಕೆ ಭೇಟಿ ಕೊಡುವರು.

× 38 ದ್ವಂದ್ವದಲ್ಲಿ ಚೀನ ಕಮ್ಯುನಿಸ್ಟರು ಭದ್ರತೆ ಪ್ರಶ್ನೆದಲ್ಲಿದ್ದಾರೆ

× ಶ್ರೀಮತಿ ಶಾನೋದೇವಿ ಪಂಜಾಬ ಶಾಸನ ಸಭೆ ಉಪಾಧ್ಯಕ್ಷರಾದರು.

× ಹೈದಂಬ್ರಾದ್ನಲ್ಲಿ ಕಮ್ಯುನಿಸ್ಟರು 2 ಪೋಲೀಸರನ್ನು ಕೊಂದಿದ್ದು.

ಏಪ್ರಿಲ್ ತಿಂಗಳಿನಿಂದ ಅರಿವೆ ಸಲೀಸಾಗಿ ದೊರೆಯುವುದು

ದಿವ್ಯವಾಣಿ

ಪರರಿಗೆ ಹಾನಿ ಮಾಡುವವನು
ತನಗೆ ತಾನೇ ಘೋರ ಹಾನಿ ಮಾಡಿ
ಕೊಳ್ಳುತ್ತಾನೆ
ಇತರರಿಗೆ ನೆರವಾಗುವವನು
ತನಗೆ ತಾನೇ ಶುಂಬ ನೆರವಾಗುತ್ತಾನೆ
ನಾನು, ನನ್ನದು ಎಂಬ ಮಾಯೆ
ನಿಮ್ಮ ಪ್ರಾಣಸ್ಪಂದನದಿಂದ ಮರೆಯಾಗಲಿ
ನಿಮ್ಮ ದಾರಿ ನಿಮಗೆ ಸುಗಮವಾಗುವುದು
ನಿಮ್ಮ ದಾರಿ ನಿಮಗೆ ಸ್ಪಷ್ಟವಾಗುವುದು.

— ಶ್ರಮಣ

ಅಜಾದರ ಹೇಳಿಕೆಗೆ ಪ್ರತಿಭಟನೆ

ಉತ್ತರ ಪ್ರದೇಶದ ವಿದ್ಯಾ ಮಂತ್ರಿ ಶ್ರೀ ಸಂಪೂರ್ಣಾನಂದರು ಕೇಂದ್ರ ವಿದ್ಯಾ ಮಂತ್ರಿ ಶ್ರೀ ಮೌಲಾನಾ ಅಬುಲ ಕಲಂ ಆಜಾದರು ಹಿಂದಿ ಬಗ್ಗೆ ಇತ್ತೀಚೆಗೆ ಹೇಳಿಕೆಯನ್ನು ಪ್ರತಿಭಟಿಸಿದ್ದಾರೆ. ಕೇಂದ್ರ ಮಂತ್ರಿಗಳು ಅಖಿಲ ಭಾರತ ಹಿಂದಿ ಪರಿಷತ್ನಲ್ಲಿ ಹಿಂದಿ ಈಗಿನ ಭಾಷೆ ಎಂದಿದ್ದರು.

ವನಮಹೋತ್ಸವ

ಈ ವರ್ಷ ಜುಲೈ ತಿಂಗಳಿನಲ್ಲಿಯೂ ಸಹ ಕಳೆದ ವರ್ಷದಂತೆಯೆ ಇಡೀ ಭಾರತದಲ್ಲಿ ವನಮಹೋತ್ಸವ ಮಾಡಲು ದೆಹಲಿ ಸರ್ಕಾರ ನಿರ್ಧರಿಸಿದೆ. ಕಳೆದ ವನಮಹೋತ್ಸವದ ಫಲಿತಾಂಶ ಹೇಗಿದ್ದೊ?

ಬಟ್ಟೆ ಸಿಕ್ಕುತ್ತೆ

ಮುಂದಿನ ತಿಂಗಳಿಂದ ಬಟ್ಟೆ ದೊರೆಯೋದರ ತಾಪತ್ರಯವಷ್ಟಾಗಿ ಹಾದೆಂದೂ ಬಟ್ಟೆ ಸಲೀಸಾಗಿ ಸಿಕ್ಕುವದೆಂದೂ ಬೆಂಗಳೂರಿನಿಂದ ಗೊತ್ತಾಗಿದೆ. ಜೊತೆಗೆ ಪಡಿತರ ಹೆಚ್ಚಿಸುತ್ತಾರೆಂದು ಕೇಳುತ್ತಿರೋದು ಜನರ ಮನಸ್ಸಿನಲ್ಲಿ ಸ್ವಲ್ಪ ನೆಮ್ಮದಿ ತರ್ತಿದೆ.

ದಾಸಪ್ಪೋರಿಗೆ ಅರ್ಥವ್ವ ಆಗಿಲ್ಲವಂತೆ!

ಹೋದ ಬಾರಿ ಮುಂಗಡಪತ್ರನ ಹಾಡಿ ಹೊಗಳಿದ ಶ್ರೀ ತಾಳಿಕೆರೆ ಸುಬ್ರಹ್ಮಣ್ಯ ಮತ್ತು ಶ್ರೀ ಎ ಜಿ. ರಾಮಚಂದ್ರ ರಾಯರು ಈ ಬಾರಿ ಅದೇಕೆ ಅಷ್ಟು ಉಗ್ರವಾಗಿ ಟೀಕಿಸಿ ಸರ್ಕಾರದಲ್ಲಿ ದಕ್ಷತೆ ಕಳಗಿಳಿದಿದೆಯೆಂದು ಏಕೆ ಸುಡಿದರೋ ನಾ ಕಾಣೆ – ಎಂದಿದ್ದಾರೆ ಸಚಿವ ಶ್ರೀ ದಾಸಪ್ಪನವರು ಬೆಂಗಳೂರಿನಲ್ಲಿ.

ಹೌರಾ ಆಯ್ಕೆ ಫಲಿತಾಂಶ

ಮೊನ್ನೆ ಹೌರಾದಲ್ಲಿ ನಡೆದ ಪೌರಸಭೆ ಚುನಾವಣೆಯ 5 ವಾರ್ಡುಗಳ ಫಲಿತಾಂಶಗಳು ಪ್ರಕಟವಾದವು. ಕಾಂಗ್ರೆಸಿಗೆ ಹತ್ತು ಸ್ಥಾ. 3 ಸ್ಥಾನಗಳು ಸಮಾಜವಾದಿ ಎಡಪಕ್ಷಗಳಿಗೆ ಸಿಕ್ಕಿವೆ.

ಕೆಂಪವರನ್ನು ಓಡಿಸಬಹುದು

ಕಮ್ಯುನಿಸ್ಟರನ್ನು ಸೋಲಿಸಲು ಸಾಧ್ಯವಾಗುವದೆಂದು ಸಂಯುಕ್ತರಾಷ್ಟ್ರ ಸಂಸ್ಥೆಗೆ ಜನರಲ್ ಮೆಕಾರ್ಥರ್ ವರದಿ ಮಾಡಿದ್ದಾರೆಂದು ಲೇಕ್ಸಕ್ಸಸ್ ವಾರ್ತೆ.

ಶಾಸನ ನಿರ್ಮಾಣಕರು ಕತ್ತಿ ಹಿಡ್ದು ಕ್ಷೌರ ಮಾಡಿದ್ರು!

ಹೇಂರಾಜ್ ಪೋರ್ವಾಲ್ ಎಂಬವರು 25 ಮಂದಿ ಹರಿಜನರಿಗೆ ಕ್ಷೌರ ಮಾಡಿದ್ದಾ! ಎಂದು ಗ್ವಾಲಿಯರ್ ವಾರ್ತೆ ಶೈಲ್ಪ ಎಂಬಲ್ಲಿ ಕ್ಷೌರಿಕರು ಹರಿಜನರಿಗೆ ಕ್ಷೌರ ಮಾಡಲೊಲ್ಲದೆ ಹೋದಾಗ ಪೋಲೀಸರೆ ಕ್ಷೌರ ಮಾಡಿದರು. ಇವರು ಮಧ್ಯ ಭಾರತ ಶಾಸನ ಸಭೆ ಕಾಂಗ್ರೆಸ್ ಸಭ್ಯರು.

× 6/0 ಅಮೇರಿಕ ನೌಕೆಗಳನ್ನು ವಾಪಸು ಮಾಡಲ ರಷ್ಯ ನಿರಾಕರಿಸಿತೆಂದು ವಾಷಿಂಗ್ಟನ್ ವಾರ್ತೆ.

ಆಹಾರ ಸಮಸ್ಯೆಯ ನಿಜ ಸ್ವರೂಪ, (೨)

ಆಹಾರ ಪದಾರ್ಥಗಳು ಸಾಲದೇ ಹೋಗುತ್ತವೆ ಎಂದು ತಿಳಿದುಬಂದಾಗ 'ಹೆಚ್ಚು ಆಹಾರ ಬೆಳೆಯಿರಿ' ಪ್ರಚಾರವನ್ನೂ ಕಾರ್ಯಕ್ರಮವನ್ನೂ ಸರಕಾರದವರು ಅನುಸರಿಸಿದರು. ಅದು ಸಾಧುವಾದುದು, ನ್ಯಾಯವಾಗಿ ಮಾಡಬೇಕಾದ್ದನ್ನು ಮಾಡಿದರು. ಆಹಾರೋತ್ಪತ್ತಿಯನ್ನು ಹೆಚ್ಚಿಸಲು, ಸರಕಾರದವರು ಖಾಲಿ ಬಿದ್ದ ಜಮೀನುಗಳನ್ನು ಸರಿಯಾಗಿ ವ್ಯವಸಾಯ ಮಾಡಲು ಇಷ್ಟವುಳ್ಳವರಿಗೆ ಕೊಟ್ಟು ಆ ಮೂಲಕ ಆಹಾರೋತ್ಪನ್ನವನ್ನು ಹೆಚ್ಚಿಸಲು ಯತ್ನಿಸಬೇಕು. ಅದೊಂದು ಮುಖ್ಯ ಸಾಧನವು. ಸಮ್ಮ ಸಂಸ್ಥಾನದ ಸರಕಾರದವರು ಕೊಂಚ ಮಟ್ಟಿಗೆ ಈ ದಾರಿಯಲ್ಲಿ ಪ್ರವೃತ್ತರಾಗಿರುವಂತೆ ಕಂಡುಬಂದಿದೆ; ಆದರೆ ಅದರಿಂದ ಸಾಧಿಸಿರುವ ಮಹತ್ಫಲವೇನು? ಎಂಬುದನ್ನು ನೋಡೋಣ.

ಹಿಂದೆ ಐದು ವರ್ಷಗಳಲ್ಲಿ ಇದ್ದುದಕ್ಕಿಂತಲೂ ಮೂರು ಲಕ್ಷ ಎಕರೆ ಜಮೀನು ಹೆಚ್ಚಾಗಿ ಹಿಡುವಳಿಯಾಗಿರುವುದು ಕಾಣುತ್ತೆ. ಇದು ಪ್ರತ್ಯಕ್ಷ 'ಹೆಚ್ಚು ಆಹಾರ ಬೆಳೆಯಿರಿ' ಕಾರ್ಯಕ್ರಮಕ್ಕೆ ಅನುಸಾರವಾಗಿ ಇರಬೇಕೆಂದು ಊಹಿಸಬಹುದು ; ಆದರೂ ಸಂಸ್ಥಾನದಲ್ಲಿ ಇನ್ನೂ 18 ಲಕ್ಷ ಎಕರೆ ಜಮೀನು 'ಬಂಜರು' ಇರುತ್ತದೆ ಅದನ್ನೇಕೆ ಯಾರಿಗೂ ಕೊಡಲಿಲ್ಲ ? ಯಾರೂ ಅದನ್ನು ಕೇಳಲಿಲ್ಲವೇ ? ಸರಿಯಾದ ಜನಗಳು ಸಿಕ್ಕಲಿಲ್ಲವೇ ? ಅಥವಾ ಅಷ್ಟು ಹದಿನೆಂಟು ಲಕ್ಷ ಎಕರೆ ಜಮೀನು ಬಂಜರಾಗಿಯೇ ಉಳಿಯಬೇಕೆಂದು ನಿರ್ಧರಿಸಿದೆಯೆ ? ಇರಲಿ ; ಮೂರು ಲಕ್ಷ ಎಕರೆಯಾದರೂ ಹೆಚ್ಚಾಗಿ ಹಿಡುವಳಿಯಾದುದು ಸಂತೋಷವು.

ಹಿಡುವಳಿಯಾದ ಜಮೀನು ಸಾಗುವಳಿಯಾಗುವಂತೆ, ಆದರಲ್ಲಿಯೂ ಈ ಆಹಾರಾಭಾವದ ಕಾಲದಲ್ಲಿ, ಸರಕಾರದವರು ಸರಿಯಾಗಿ ನೋಡಿಕೊಳ್ಳಬೇಕಾದದ್ದು ಅಗತ್ಯವು ; ಐದು ವರ್ಷಗಳ ಹಿಂದೆ ಅಂದರೆ ೧೯೪೬ನೇ ಇಸವಿಯಲ್ಲಿ ಲಕ್ಷ ಎಕರೆ ಜಮೀನು ಸಾಗುವಳಿಯಾಗಿತ್ತು ; ಕಳೆದ ವರ್ಷ ಹೆಚ್ಚಿಗೆ ಹಿಡುವಳಿಯಾದ ಮೂರು ಲಕ್ಷ ಎಕರೆ ಸೇರಿ ಅಂದರೆ ೧೯೫೦ನೇ ಇಸವಿಯಲ್ಲಿ ಲಕ್ಷ ಎಕರೆ ಜಮೀನು ಮಾತ್ರ ಸಾಗುವಳಿಯಾಗಿದೆ ; ಮೂರು ಲಕ್ಷ ಎಕರೆ ಜಮೀನು ಹೆಚ್ಚು ಸಾಗುವಳಿಯಾಗಬೇಕಾದುದರ ಬದಲಿಗೆ ಏಳೂಕಾಲು ಲಕ್ಷ ಎಕರೆ ಜಮೀನು ಕಡಮೆ ಸಾಗುವಳಿಯಾಗಿದೆ, 'ಹೆಚ್ಚು ಆಹಾರ ಬೆಳೆಯಿರಿ' ಕಾರ್ಯಕ್ರಮಕ್ಕೆ ಅನುಸಾರವಾಗಿ ಹೆಚ್ಚು ಸಾಗುವಳಿ ಮಾಡಿಸಿ, ಹೆಚ್ಚು ಬೆಳೆ ಸಿಗುವಂತೆ ಮಾಡುವುದು ಸರಕಾರದ ಕರ್ತವ್ಯವಾಗಿದ್ದರೂ ಸಾಗುವಳಿಯಾಗುತ್ತಿದ್ದ ಜಮೀನಿನಲ್ಲಿಯೇ ಮೂರೂಕಾಲು ಲಕ್ಷ ಎಕರೆ ಜಮೀನು ಸಾಗುವಳಿಯೇ ಆಗಲಿಲ್ಲವೆಂಬುದು ಈಗಿನ ಕಾಲದಲ್ಲಿ ಉದಾಸೀನ ಮಾಡತಕ್ಕ ವಿಷಯವಲ್ಲ : ಅದಂಲ್ಲಿಯೂ ಸರಕಾರದವರು ಹೆಚ್ಚು ಆಹಾರಕ್ಕಾಗಿ ಸುಮಾರು ಹನ್ನೆರಡು ಕೋಟಿ ರೂಪಾಯಿಗಳಷ್ಟನ್ನು ಖರ್ಚು ಮಾಡಿ ಕೃಷ್ಣರಾಜ ಸಾಗರದಂಥಾ ಜಲಾಶಯವನ್ನೇ ಬತ್ತಿಸಿ ಏಳೂಕಾಲು ಲಕ್ಷ ಎಕರೆ ಜಮೀನು ಬಂಜರು ಇರುವುದನ್ನು ಸಹನೆ ಮಾಡಿರುವುದು ಅಕ್ಷಮ್ಯವು.

[ಮುಂದುವರಿಯುವುದು

"ಗೋರಕ್ಷಣಿ"

ಪ್ರತಿ ತಿಂಗಳ ಕಾಲು ೧೭ಲ್ಲಿ ಪ್ರಕಟವಾಗುವ 'ಗೋರಕ್ಷಣ' ದಲ್ಲಿ ಗೋರಕ್ಷಣೆ, ಪಾಂಜರಪೋಲೆಯ, ಸಸ್ಯಾಹಾರ, ಪಶುವೈದ್ಯ, ಇವುಗಳನ್ನು ಕುರಿತಾದ ಲೇಖನಗಳು ಪ್ರಕಟಿಸಲ್ಪಡುವವು

ಪತ್ರಿಕೆಗೆ ಪೋಷಕರಾಗಿಯೂ, ಚಂದಾದಾರರಾಗಿಯೂ, ಲೇಖಕರಾಗಿಯೂ ಪ್ರಚಾರಕರಾಗಿಯೂ ಸಹಕಾರ ನೀಡುವ ಮಹನೀಯರಿಗೆ ವಂದನೆಗಳು.

ಅನುಕೂಲವಾದಂತೆಲ್ಲಾ ಪುಟ ಸಂಖ್ಯೆ ಹೆಚ್ಚಿಸಲಾಗುತ್ತೆ.

ವಿಳಾಸ : 'ಗೋರಕ್ಷಣ' ಸತ್ಯವಾದಿ ಆಫೀಸ್, ಮೈಸೂರು

Announcement

Theatre building old materials and furniture are being sold very cheap

Apply to—
NEW OPERA TALKIES
MYSORE

ಸಿನೆಮಾ ಕಟ್ಟಡದ ಹಳೇ ಸಾಮಾನುಗಳೂ ಫರ್ನೀಚರುಗಳೂ ಸುಲಭ ಬೆಲೆಗೆ ಮಾರಾಟಕ್ಕಿವೆ.

ವಿವರಗಳಿಗೆ—
ನ್ಯೂ ಅಪೇರಾ ಟಾಕೀಸ್
ಮೈಸೂರು

ಉಡ್‌ಲ್ಯಾಂಡ್ಸ್ ಜನಭರಿತ 2 ನೇ ವಾರ

ವನಸುಂದರಿ ❁ Vanasundari

ಸಿ. ಯು. ಚಿನ್ನಪ್ಪ, ಟಿ. ಆರ್. ರಾಜಕುಮಾರಿ, ಬಾಲಯ್ಯ ಪುಳಿಮೂಟಿ
ಕೃಷ್ಣ, ಮಧುರಂ, ಲಲಿತ, ಪದ್ಮಿನಿ ಅಭಿನಯಿಸಿರುವರು

ಅಮೋಘ ತಮಿಳು ಚಿತ್ರ — ಪ್ರತಿ ದಿನ 3 ಆಟಗಳು ; ಮ್ಯಾಟಿನಿ 3 ಗಂಟೆಗೆ

— ಬೆಳಗಿನ ಪ್ರದರ್ಶನ — 30—4—51 ರಿಂದ — 3 ದಿನಗಳು

"ಅಡ್ವೆಂಚರ್ಸ್ ಆಫ್ ಕ್ಯಾಪ್ಟನ್ ಮಾರ್ವೆಲ್" (ರಿಪಬ್ಲಿಕ್ ಸೀರಿಯಲ್)

ರಣಜಿತ್ ಕೀರ್ತಿಯುತ 4 ನೇ ವಾರ

ನರ್ಗಿಸ್, ದಿಲೀಪ್ ಕುಮಾರ್, ಮನ್ವರ್ ಸುಲ್ತಾನ ಪಾತ್ರವಹಿಸಿರುವ

BABUL ❁ ಬಾಬುಲ್

ಅಮೋಘ ಹಿಂದಿ ಚಿತ್ರ — — ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ — 30—4—51 ರಿಂದ 3 ದಿವಸಗಳು

"ದರ್ದ್" (ಹಿಂದಿ) ಪಾತ್ರ— ಮನ್ವರ್ ಸುಲ್ತಾನ್, ಸೂರೈಯ

Edited, Printed and Published by M. S. Krishna Rao, at the Satyavadi Press Chamrajpuram Mysore

ಕೊರಿಯಾದಲ್ಲಿ ಕಮ್ಯುನಿಸ್ಟು ಆಕ್ರಮಣ ತಡೆಯುತ್ತಿರುವ ವಿಶ್ವಸಂಸ್ಥೆ ಪಡೆ